**ಅಸಲು ದಾವಾ ಸಂಖ್ಯೆಃ - 215/2019** **ಪಿ.ಡಬ್ಲ್ಯೂ:-1**

ದಿನಾಂಕಃ **08-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-

ನನಗೆ ಓದು ಬರಹ ಬರುವುದಿಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಏನು ಸಲ್ಲಿಸಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನನ್ನ ಜಮೀನಿನಲ್ಲಿ ತಮ್ಮ ಜಮೀನು ಬರುತ್ತದೆ ಎಂದು ತೊಂದರೆ ಕೊಡುತ್ತಿದ್ದರಿಂದ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇ ನಂ.38 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಟಿಪ್ಪಣಿ ಕಾಪಿ, ಆಕಾರ ಬಂಧು ಮತ್ತು ಅಟ್ಲಾಸ್ ಕಾಪಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆಕಾರ ಬಂಧು ಕೊಟ್ಟಿದ್ದೇನೆ ಆದರೆ ಟಿಪ್ಪಣಿ ಕಾಪಿ ಮತ್ತು ಅಟ್ಲಾಸ್ ಕಾಪಿಯನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.38 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-1 ಮತ್ತು 4 ರಲ್ಲಿ ನಮೂದಾಗಿರುವ ಚಕ್ಕುಬಂಧಿಯಲ್ಲಿ ಯಾವುದು ಸರಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಎರಡು ಸರಿ ಇದೆ ಎಂದು ನುಡಿಯುತ್ತಾರೆ. ನಿಪಿ-1 ಕ್ರಯ ಪತ್ರದ ಮಾರಾಟಗಾರರಾದ ಶೇಖರಯ್ಯ ನನಗೆ ಮಾವರಾಗಬೇಕು. ಸರ್ವೇ ನಂ.38 ಕ್ಕೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ 216/2019 ಮತ್ತು 217/2019 ಎರಡು ದಾವೆಗಳು ಚಾಲ್ತಿಯಲ್ಲಿದ್ದಾವೆ ಎಂದರೆ ಸರಿ. ಸರ್ವೇ ನಂ.38 ರಲ್ಲಿ ಒಟ್ಟು 28 ಎಕರೆ 4 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.